ತಾರೀಖು 26ನೇ ಮಾರ್ಚಿ 1889.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಸಕ್ರ 1889ನೇ ಇಸವಿ ಮೇ 15ನೇ ತಾರೀಖು ಲಾಗಾಯತು 1890ನೇ ಇಸವಿ ಮಾರ್ಚಿ ತಾರೀಖು 31ರ ವರಿಗೆ ಇದರ ಕೆಳಗೆ ನಮೂದಿಸಿರುವ ತಾಲ್ಲೂಕುಗಳಲ್ಲಿ ಸಂದಲ್ ಹಳೇ ಜಡಗಳನ್ನು ಕಿತ್ತು ತಯಾರಿಯಿಂದ ಬಾಜಾದಲ್ಲಿ ನಮೂದಿಸಿರುವ ಕೋಠಿಗಳಿಗೆ ಸಾಗಿಸಲು ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿವೆ.

2. ಪ್ರತಿ ದರಖಾಸ್ತುದಾರನೂ ತಾನು ಸಂದಲ್ ಹಳೇ ಜಡಗಳನ್ನು ಕಿತ್ತು ತಯಾರಿಯಿಂದ ಸಾಗಿಸಲು ಮೈಪ್ಪಿಕೊಳ್ಳುವ ಕಮ್ಮಿ ದರವನ್ನು ನಮೂದಿಸತಕ್ಕದ್ದು.

3. ಪ್ರತಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನೂ ತನ್ನ ಖರಾರಿನಂತೆ ನಡಿದುಕೊಳ್ಳುವದಕ್ಕಾಗಿ ಪ್ರತಿ ಬಂದು ತಾಲ್ಲೂಕಿಗೂ 200 ರೂಪಾಯಿಗಳಂತೆ ಗವರ್ಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡತಕ್ಕದ್ದು. ಖರಾರಿನಂತೆ ನಡಿಯದೇ ತಪ್ಪಿದಲ್ಲಿ ಈ ಮೊಬಲಗು ಗವರ್ಮೆಂಟಿಗೆ ಕೇರಿಸಿಕೊಳ್ಳಲ್ಪಡುವದು.

4. ದರಖಾಸ್ತುಗಳು ಮೈಸೂರ್ ಫಾರೆಸ್ಟ್ ಸೂಪರ್ಟೆಂಡೆಂಟ್ ಸಾಹೇಬರವರಿಂದ 1889ನೇ ಇಸವಿ ಏಪ್ರೆಲ್ ತಾರೀಖು 25ರ ವರಿಗೆ ಅಂಗೀಕರಿಸಲ್ಪಡುವದು.

5. ಫಾರೆಸ್ಟ್ ಸೂಪರ್ಟೆಂಡೆಂಟ್ ಸಾಹೇಬರವರು ಕಮ್ಮಿ ದರವನ್ನುಳ್ಳ ದರಖಾಸ್ತನ್ನು ಅಂಗೀಕರಿಸುವದಕ್ಕಾಗಲಿ ಯಾ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸಿದ್ದಕ್ಕೆ ಕಾರಣವನ್ನು ಕೊಡುವದಕ್ಕಾಗಲಿ ಬದ್ಧರಾಗಿಲ್ಲವು.

ಹುಣಸೂರು ತಾಲ್ಲೂಕಿನಿಂದ	.. ..	ಹುಣಸೂರು ಕೋಠಿಗೆ.
ಹೆಗ್ಗಡದೇವನಕೋಟೆ ತಾಲ್ಲೂಕಿನಿಂದ	..	ಡಿಟೋ
(ಹುಣಸೂರು ಯಲ್ಲಿಯ ಅಂತ್ಯದಿಂದ ಮೈಸೂರ ಮಾನಂತ್ವಾಡಿ ರೋಡ್ ವರವಿಗೆ.)		
ಎಡತೊರೆ ತಾಲ್ಲೂಕಿನಿಂದ	.. ..	ಶ್ರೀರಂಗವಟ್ಟಣ ಕೋಠಿಗೆ.

ಕಂಟ್ರಾಕ್ಟುದಾರನು ಲಿಖ್ತಕ್ಕೆ ತೆರಲ್ಪಟ್ಟ ತೇದಾದಿನ ಮೇಲೆ ಆರವಾನಿ ವಗೈರೆ ಧರ್ಶಿಗಾಗಿ ಕೇಕಡಾ 10 ಮೇರೆ ಹೆಚ್ಚು ತೂಕವನ್ನು ಕೊಡಲು ಬದ್ಧನಾಗಿರತಕ್ಕದ್ದು.

ಸಿ. ಇ. ಎಂ. ರಸ್ಸೆಲ್,
ಫಾರೆಸ್ಟ್ ಸೂಪರ್ಟೆಂಡೆಂಟ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 25ನೇ ಫಿಬ್ರವರಿ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ನಮೂದಾಗುವ ತಾಲ್ಲೂಕುಗಳಲ್ಲಿ ಕುರಂಗದ ಕಲ್ಲು ಜವಾಯಿಸತಕ್ಕ ಹಕ್ಕು 1889ನೇ ಇಸವಿ ಮಾರ್ಚಿ ತಾರೀಖು 30ರಲ್ಲು ಆಯಾಯ ತಾಲ್ಲೂಕು ಕಛೇರಿಯಲ್ಲಿ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ. ಹರಾಜ್ ಬಿವಿ 11 ಘಂಟೆಗೆ ಆರಂಭಿಸಲ್ಪಡುವದು.

ಬವರಿಂಗ್‌ಪೇಟೆ, ಕಿಲ್ಲಘಟ್ಟ, ಗೋಬಿದನೂರು.

2. ಅಮಲ್ದಾರ್ರು ಅಥವಾ (ರಸ್ತೇಕಾರ್ರು) ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು, ಮೈಸೂರು ದಿವಾನ್‌ಸಾಹೆಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

4. ಇಜಾರೆ 1890ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ಜಾರ್ಯಲಿರುವದು.

5. ಹರಾಜು ಕಾಲದಲ್ಲಿ ಸವಾಲ್‌ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್‌ಮಾಡುತ್ತಾರೋ ಅಥವಾ ಯೇಜಂಟ್‌ವಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು, ಯೇಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್‌ಮಾಡುತ್ತಾರೋ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆ ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

6. ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ ಹಾಜರ್ಮಾಡಬೇಕು. ಹರಾಜು ಮಂಜೂರಾದ ಸಂಗತಿ ಅಮಲ್ದಾರ್ರಿಂದ ತಿಳಿಸಲ್ಪಟ್ಟ ಲಾಗಾಯತು 7 ದಿವಸಗಳ ವಳಗಾಗಿ ಬಾಕಿ ಮೊಬಲಗನ್ನು ಮತ್ತು ಚಡ ಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆ ಮೇಲ್ಗೆ ಲೋಕಲ್‌ಸೆಸ್ ಸಹ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವದು ಡಿಪಾಜಿಟ್ ಹಾಜರ್ಮಾಡದೇ ಇದ್ದಾಗ್ಯೂ ಅಥವಾ ಬಾಕಿ ಮೊಬಲಗು ಪೂರತಿ ಮಾಡದೆ ಯಿದ್ದಾಗ್ಯೂ ಈ ಬಾಬು ಪುನಃ ಹರಾಜು ಮಾಡಲ್ಪಟ್ಟು ಅದರಿಂದ ಮೊಂಟಾಗುವ ನಷ್ಟಕ್ಕೆ ಮೊದಲ ಚಡಸವಾಲ್‌ದಾರನು ಗುರಿಮಾಡಲ್ಪಡುವನು.

7. ಇಜಾರದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿವಿನಹ ಆರಿ ಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿರತಕ್ಕ ಕಲ್ಲುಗಳು ಜವಾಯಿಸಿಕೊಳ್ಳುವದಕ್ಕೆ ಆಗಲಿ ಅಥವಾ ಇಜಾರ್‌ದಾರ್ ವಿನಹ ಇತರರಿಗೆ ಸೋರುವದಕ್ಕೆ ಆಗಲಿ ಹಿಡುವಳಿದಾರ್ರಿಗೆ ಅಧಿಕಾರ ವಿರುವದಿಲ್ಲ.

8. ಇಜಾರದಾರನು ಹುಲ್ಲುಬನ್ನಿ ಯಾ ಹುಲ್ಲುಗಾವಲ್ ಇಜಾರದಾರ್ರ ಹಕ್ಕಿಗೆ ಆಟಂಕಪಡಿಸಕೂಡದು.

9. ಹಿಡುವಳೀಲಿ ಇಲ್ಲದ ಜಮೀನಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರದಾರನ ಅಭ್ಯಂತರವೇನೂ ಯಿರುವದಿಲ್ಲ. ಪರಂತು, ಅಂಥಾ ಜಮೀನಗಳಲ್ಲಿ ಏಕ್ಕುವ ಕುರಂಗದ ಕಲ್ಲುಗಳನ್ನ ತೆಗಪುಕೊಳ್ಳಲು ಅವನಿಗೆ ಹಕ್ಕು ಯಿರುತ್ತೆ.

10. ಕಲ್ಲುಗಳನ್ನ ಜವಾಯಿಸುವದಕ್ಕಾಗಿ ಜಮೀನಗಳನ್ನ ಇಜಾರೆದಾರನು ಅಗಿಜುಕೂಡದು. ಬಂದುವೇಳೆ ಅಗದರೆ ಸಾಗುವ ಳಿಗೆ ಅನುಕೂಲವಾಗುವ ಹಾಗೆ ಗುಣಿಗಳನ್ನ ಮುಚ್ಚಿ ಸರಪಡಿಸಬೇಕು.

ಅಬ್ದುಲ್‌ರಹಿಮ್ಮಾ,
ಡಿಪ್ಯೂಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 14ನೇ ಮಾರ್ಚಿ 1889.

ತಿಪಟೂರು, ಪಾವಗಡ ಈ ಸಬ್ ರೆಜಿಸ್ಟ್ರಾರ್‌ಗಳ ಆಫೀಸಿನಲ್ಲಿ ಈ ಕೆಳಗೆ ನಮೂದಿಸಿರುವ ದಸ್ತಾವೇಜಿಗೆ ಸಂಬಂಧಪಟ್ಟವರೆ ಆಗಲಿ ಆಥವಾ ಕ್ರಮವಾಗಿ ಅಧಿಕಾರ ಪಡದ ಮುತಾಲೀಕರೆ ಆಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ಒಳಗಾಗಿ ವಾಪಸ್ ಪಡಿಯಲು ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ಇಂಡ್ಯನ್ ರೆಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆ ನಾಶಪಡಿಸಲ್ಪಡುವದು.

ನಂಬರ್.	ದಸ್ತಾವೇಜನ್ನು ಬರೆದುಕೊಟ್ಟವರ ಹೆಸರು.	ದಸ್ತಾವೇಜನ್ನು ಬರೆಸಿಕೊಂಡವರ ಹೆಸರು.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರಾರ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
258 ——— 1886—87	ತಿಪಟೂರು ತಾಲ್ಲೂಕು ಈಚನೂರು ವಾಸಸ್ಥ ವೊಗ್ಗಾಣದ ಗುರವಂಣ ಕಟ್ಟಮಗ ಹಾಲಪ್ಪಕಟ್ಟಿ ಜಕಟ್ಟ	ಗುಬ್ಬಿ ತಾಲ್ಲೂಕು ಕ ನಟಾ ಗುಬ್ಬಿ ಗ್ರಾಮದ ಲ್ಲಿರುವ ವಾಣಿ ಮಲ್ಲುಂ	15 1 87	31 1 87	ಈಚನೂರು ಗ್ರಾಮದಸರ್ವೆ 16ನೇ ನಂಬರ್ ಎಕರೆ 1–37 ಆಕಾರ 6–8–0 ಸರ್ವೆ249ನೇ ನಂ. ಫೋಡು 2ರ ಬೂಬತು ಎಕರೆ 2–18 ಆಕಾರ 2–4 ಮತ್ತು ಇದೆ ನಂ. ಪೈಕಿ ಎಕರೆ 2—2 ಆಕಾರ 2–4 ಸರ್ವೆ 78ನೇ ನಂಬರ್ ಪೈಕಿ ಸರ್ವೇ 158ನೇ ನಂ. ಪೈಕಿ ಗದ್ದೆ ಎಕರೆ 32 ಆಕಾರ 3–12 ಮತ್ತು ಈಚನೂರು ಗ್ರಾಮದಲ್ಲಿ ಹಾನು ವಾಸಮಾಡುವ ಮನೆ ಖಾನೇಷುಮಾರಿ ನಂ 103—108 ವಾಳಿಗೆ ಮನೆ ಮತ್ತು 122 ನಂ. ನಿವೇಕನ ಸಹ 400 ರೂಪಾಯಿಗೆ ಆಧ ಮಾಡಿರುವದಾಗಿ
30 ——— 1886—87	ಪಾವಗಡದ ತಾಲ್ಲೂಕು ರಾಚೆರ್ಲು ಹೋಬಳಿ ಬಳ್ಳಸಮುದ್ರದಲ್ಲಿರುವ ಸ್ಮಾರ್ತಬ್ರಾಹ್ಮಣ ಜಾ ನುಭೋಗ ಅಪ್ಪಯ್ಯನ ಮಕ್ಕಳಾದ ವೆಂಕಟರ ಮಣಪ್ಪ, ಕೊಂಡಪ್ಪ, ನಾರಣಪ್ಪ, ನಂಜಪ್ಪ	ಪಾವಗಡದ ತಾಲ್ಲೂ ಕು ರಾಚೆರ್ಲು ಹೋಬ ಳಿ ತಿರುಮಣಿ ವಾಸಸ್ಥ ವೈಕ್ಯರ ದೇವತ ಲಿಚ್ಚ ಯ್ಯನ ಮಗ ಚಲಮ ಯ್ಯ	6 12 86	6 12 86	ರ್ಯಾಪಟಿ ಮಜರೆ ನಾಗೇನಹಳ್ಳಿ ಬಳಿಯಣ ಸರ್ವೆ 222ನೇ ನಂ. ನಾರಣಪ್ಪನ ಖಾತೆ ದಾಖಲೆ ಬಾಗಾ ಯತು 3–30 ಎಕರೆ ಆಕಾರ 9–8 ಸಾಬಕು ಬ ರದುಕೊಟ್ಟವರ ಅನುಭವದಲ್ಲಿದ್ದು ಹಾಲಿ ಬರಸಿ ಕೊಂಡವರ ಪಟ್ಟೆ ದಾಖಲೆ ಬಳ್ಳಸಮುದ್ರ ಗ್ರಾ ಮದ ಬಳಿಯಣ ಸರ್ವೆ 121ನೇ ಪೈಕಿ ಫೋಡು 1ನೇ ಎಕರೆ 2–24 ಆಕಾರ 7–8 ಪುಳ್ಳ ಈ ಯರಡು ಜಮೀನನ್ನೂ 180 ರೂಪಾಯಿಗೆ ಕ್ರಯಮಾಡಿರುವದಾಗಿ

ಪಿ. ಯ್ಯ. ಕೃಷ್ಣಮೂರ್ತಿ,
ರೆಜಿಸ್ಟ್ರಾರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್ ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 261.

ಬೆಂಗಳೂರಲ್ಲಿ ಇದ್ದು ಮೃತಪಟ್ಟ ಲಕ್ಷ್ಮಣಸಾಹುಜಿರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಚಿತಂಬರಸಾಹುಜಿ, ಮೃತಪಟ್ಟ ಸದರೀ ಲಕ್ಷ್ಮಣಸಾಹುಜಿರಿಗೆ ಅಂಣ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ಚಿತಂಬರಸಾಹುಜಿರು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಲಕ್ಷ್ಮಣಸಾಹುಜಿರ ಜೀವದಗೀ ಬ್ಯಾಗಿ ಬರತಕ್ಕ ಸೂಲವನ್ನು ವ ಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.